2. ವಿಷಯ: ಜನರಲ್ ತಿಮ್ಮಯ್ಯ ಅಕಾಡೆಮಿ ಸಂಸ್ಥೆಯಲ್ಲಿ ಟೆಂಡರ್ ಕರೆದಿರುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಜನರಲ್ ತಿಮ್ಮಯ್ಯ ಅಕಾಡೆಮಿ ಸಂಸ್ಥೆಯಲ್ಲಿ 1.50 ಕೋಟಿ ರೂಪಾಯಿಗೆ ಒಂದು ಟೆಂಡರ್ ಅನ್ನು ಕರೆದಿದ್ದರು. ಟೆಂಡರ್ ಕರೆದಿರುವುದು ಕಾನೂನು ಬಾಹಿರವಾಗಿದೆ ಎಂದು ಮಾನ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದಿದ್ದೆ.

ಅಧ್ಯಕ್ಷರು: ಚರ್ಚೆಗೆ ಅವಕಾಶ ಇಲ್ಲ. ಪ್ರಶ್ನೆ ಮಾತ್ರ ಕೇಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ತಾವು ಕೇಳಿಸಿಕೊಳ್ಳುವುದಿಲ್ಲ. ಅಲ್ಲಿ ಮೊದಲ ಟೆಂಡರ್‌ಗೆ ಸ್ಟೇ ಕೊಟ್ಟಿದ್ದಾರೆ. ಸ್ಟೇ ಕೊಟ್ಟ ನಂತರ 1.5 ಕೋಟಿ ರೂಪಾಯಿಯ ಟೆಂಡರ್ ರದ್ದು ಮಾಡಿ ಅಷ್ಟೇ ಐಟಂ, ಅದೇ ಮೆಟೀರಿಯಲ್‌ಗೆ ಮತ್ತೆ 2.5 ಕೋಟಿ ರೂಪಾಯಿಯ ಟೆಂಡರ್ ಕರೆದಿದ್ದಾರೆ. ಆದ್ದರಿಂದ, ಅಲ್ಲಿರುವ ನಿರ್ದೇಶಕರನ್ನು ತಕ್ಷಣ ಸಸ್ಪೆಂಡ್ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು: ಯುವಜನ ಸೇವಾ ಇಲಾಖೆಯ ಸಚಿವರು ಇದಕ್ಕೆ ಉತ್ತರ ಕೊಡಬೇಕು. ಅವರು ಇಲ್ಲ. ಅವರು ಬಂದಾಗ ಈ ವಿಚಾರ ಮತ್ತೆ ತೆಗೆದುಕೊಳ್ಳುತ್ತೇನೆ. ಮುಂದಿನ ವಿಷಯ ಮಾನ್ಯ ರಾಜೀವ್‌ರವರದು ಇದೆ. ಅವರು ಇಲ್ಲ. ಮುಂದಿನದು ಮಾನ್ಯ ವಿಶ್ವನಾಥ್‌ರವರದು.

3. ವಿಷಯ: ಬೆಂಗಳೂರು ನಗರ ಜಿಲ್ಲೆಯಲ್ಲಿ ಕೃಷಿ ಭೂಮಿ ಪರಿವರ್ತನೆಯಾಗದೆ ಅಕ್ರಮವಾಗಿ ಬಡಾವಣೆಯನ್ನು ನಿರ್ಮಾಣ ಮಾಡುತ್ತಿರುವ ಬಗ್ಗೆ.

ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ಕೃಷಿ ಭೂಮಿ ಪರಿವರ್ತನೆಯಾಗದೆ ಅಕ್ರಮವಾಗಿ ಬಡಾವಣೆಯನ್ನು ನಿರ್ಮಾಣ ಮಾಡುತ್ತಿರುವುದು ಸರಿಯೇ? ಆ ನಿವೇಶನಗಳಿಗೆ ಡೂಪ್ಲಿಕೇಟ್ ನಮೂನೆ 9 ಮತ್ತು 11 ಅನ್ನು ಕೊಟ್ಟು ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ